ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 6, May-June, 2023, Pp. 100-105.
©IIMRD, Mysuru

www.iimrd.com

# ಮೈಸೂರು ಒಡೆಯರ ಕಾಲದ ಆಡಳಿತಾತ್ಮಕ ಕೇಂದ್ರಗಳು: ಒಂದು ಸಮೀಕ್ಷೆ

*ಡಾ. ಜಯರಾಮು.

*ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.

***ಸಾರಾಂಶ:(Abstract)***

*ಭಾರತದ ಚರಿತ್ರೆಯಲ್ಲಿ ಪ್ರಮುಖವಾದಂತಹ ಸ್ಥಾನವನ್ನು ಪಡೆದಿರುವಂತಹ ರಾಜ್ಯಗಳಲ್ಲಿ ಕರ್ನಾಟಕವು ಕೂಡ ಒಂದು. ಕನ್ನಡ ನಾಡಿನಲ್ಲಿ ಹಲವು ರಾಜಮನೆತನಗಳು ಆಳ್ವಿಕೆಯನ್ನು ನಡೆಸಿ ಗುರುತರವಾದ ಸೇವೆಯನ್ನು ಸಲ್ಲಿಸಿರುವುದನ್ನು ಕಾಣಬಹುದು. ಈ ಹಾದಿಯಲ್ಲಿ "ಮೈಸೂರು ಒಡೆಯರ ಕಾಲಾವಧಿ ಪ್ರಮುಖವಾದುದು. ಏಕೆಂದರೆ ಯಾವುದೇ ನಾಡು, ಸಂಸ್ಥಾನ ಸುವ್ಯವಸ್ಥಿತವಾಗಿ ಮುನ್ನಡೆಸಲು ಪ್ರಜೆಗಳ ರಕ್ಷಣೆ, ಅನುಕೂಲಕ್ಕಾಗಿ ಬೇಕಾದಂತಹ ಕಾರ್ಯಗಳನ್ನು ಕೈಗೊಳ್ಳಲು ಯೋಜಿತವಾದ ಚೌಕಟ್ಟಿನೊಳಗೆ ಕ್ರಮಬದ್ಧವಾಗಿ ಮಾಡುವ ಕಾರ್ಯಗಳನ್ನು ಮಾಡುವಂತಹವುಗಳನ್ನು ಆಡಳಿತವೆನ್ನಬಹುದು. ಇಂತಹ ಮಾದರಿಯ ಜನಪರ, ಜನಕಲ್ಯಾಣದ ಆಡಳಿತ ವ್ಯವಸ್ಥೆಯನ್ನು ಮಾಡಲು ಹಲವಾರು ಆಡಳಿತ ಕಛೇರಿಗಳನ್ನು ಮೈಸೂರು ಒಡೆಯರು ಸ್ಥಾಪಿಸಿ ಚಿರಸ್ಮರಣೀಯರಾಗಿದ್ದಾರೆ ಅಂತಹ ಕೆಲವು ಕುರುಹುಗಳನ್ನು ಈ ಲೇಖನದಲ್ಲಿ ಕುರಿತು ಚರ್ಚಿಸುತ್ತೇನೆ.*

***ಮುಖ್ಯಪದಗಳು (Keywords)*** *ಕರ್ನಾಟಕ ಚರಿತ್ರೆ, ಮೈಸೂರು ಅರಸರು, ಆಡಳಿತಾತ್ಮಕ ಕಛೇರಿಗಳು, ಅಠಾರ ಕಛೇರಿ.*

**ಪೀಠಿಕೆ**

ಮೈಸೂರು ಒಡೆಯರ ಅವಧಿಯಲ್ಲಿ ಆಡಳಿತ ವ್ಯವಸ್ಥೆಗೆ ಸಂಬಂಧಿಸಿದಂತೆ ಐತಿಹಾಸಿಕ ಹಿನ್ನೆಲೆ ಮತ್ತು ಪರಂಪರೆಯನ್ನು ಹೊಂದಿರುವ ಕಟ್ಟಡವೆಂದರೆ ಅಠಾರ ಕಛೇರಿ ಹಾಗೂ ಜಿಲ್ಲಾಧಿಕಾರಿಗಳ ಕಾರ್ಯಾಲಯವಾಗಿತ್ತು. ಇದು ಮಹಾರಾಜ ಮತ್ತು ಮಹಾರಾಣಿ ಕಾಲೇಜಿನ ಪಶ್ಚಿಮ ದಿಕ್ಕಿನಲ್ಲಿರುವ ಕಟ್ಟಡವಾಗಿದೆ. ಅಠಾರ ಕಛೇರಿ ಎಂದರೆ ಹದಿನೆಂಟು ಆಡಳಿತ ಶಾಖೆಗಳನ್ನು ಹೊಂದಿರುವಂತದ್ದು. ಇಂತಹ ಒಂದು ವ್ಯವಸ್ಥೆಯನ್ನು ಹದಿನೆಂಟು ಕಛೇರಿಯ ಶಾಖೆಗಳನ್ನಾಗಿ ಮಾಡಿಕೊಂಡು ಆಡಳಿತವನ್ನು ನೀಡಿರುವುದು ಪ್ರಥಮ ಬಾರಿಗೆ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಜಾರಿಗೆ ತಂದಿರುವುದನ್ನು ಕಾಣಬಹುದು. ಆದರೆ ಈ ವ್ಯವಸ್ಥೆಯನ್ನು ಹಲವಾರು ಸಣ್ಣ–ಪುಟ್ಟ ಮಾರ್ಪಾಡುಗಳನ್ನು ಮಾಡಿಕೊಂಡರು ಸಹ ಮೈಸೂರಿನ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಹಿಂದಿನ ಹದಿನೆಂಟು ಮುಖ್ಯ ವಿಭಾಗಗಳು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವುದು ಈ ಕಟ್ಟಡದ ವಿಶೇಷತೆಯಾಗಿದೆ. (ಈಗ ಜಿಲ್ಲಾಧಿಕಾರಿಗಳ

*Please cite this article as:* ಡಾ. ಜಯರಾಮು. (2023). ಮೈಸೂರು ಒಡೆಯರ ಕಾಲದ ಆಡಳಿತಾತ್ಮಕ ಕೇಂದ್ರಗಳು: ಒಂದು ಸಮೀಕ್ಷೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(6). ಪು.ಸಂ. 100–105.*

ಕಾರ್ಯಸ್ಥಳ ವರ್ಗಾಯಿಸಲಾಗಿದೆ). ಇಂತಹ ಭವ್ಯ ಕಟ್ಟಡವನ್ನು ಅಂದಿನ ಸನ್ನಿವೇಶದಲ್ಲಿ ಸುಮಾರು 93 ಎಕರೆ ಪ್ರದೇಶದಲ್ಲಿ ಕ್ರಿ.ಶ.1895ರಲ್ಲಿ ನಿರ್ಮಾಣವಾಯಿತು. ಈ ಸುಂದರ ಕಟ್ಟಡದ ವಾಸ್ತುಶಿಲ್ಪಿಯೆಂದರೆ ಮದ್ರಾಸ್ ಸಂಸ್ಥಾನದಲ್ಲಿ ಎಕ್ಸಿಕ್ಯೂಟಿವ್ ಅಭಿಯಂತರನಾಗಿದ್ದ 'ಸ್ಕಾಲ್ಡ್‌ವೆಲ್'ನ ರೂಪುರೇಷೆಯ ಮೇಲೆ ನಿರ್ಮಾಣವಾದದ್ದು. ಇದಕ್ಕೆ ತಗುಲಿದ ವೆಚ್ಚ 1.50 ಲಕ್ಷ ರೂಪಾಯಿಗಳು. ಭವ್ಯ ಕಟ್ಟಡವು ಎರಡು ಅಂತಸ್ತುಗಳ ಬೃಹತ್ ಹಜಾರವಿರುವ ಇದು ಕೊರಿಂಥಿಯನ್ ಪಿಲಾಸ್ಟರ್‌ಗಳು, ಎತ್ತರವಾದ ಮೇಲ್ಛಾವಣಿ, ತೆರೆದ ಮೊಗಸಾಲೆಗಳು, ಒಳಕೊಠಡಿಗಳು ಮತ್ತು ವಿಶಾಲವಾದ ಹಜಾರಗಳು ಕಂಡುಬರುತ್ತವೆ. ಕಟ್ಟಡವು ಐರೋಪ್ಯ ಶೈಲಿಯನ್ನು ಹೊಂದಿದ್ದಾಗಿದೆ. ನಾನು ಕ್ಷೇತ್ರಕಾರ್ಯಕ್ಕೆ ಹೋಗಿದಂತಹ ಸಂದರ್ಭದಲ್ಲಿ ಕಛೇರಿ ಮುಂದಿನ ಭಾಗದಲ್ಲಿ ಗೋರ್ಡನ್‌ರವರ ಪ್ರತಿಮೆಯು ಕಾಣಸಿಗುತ್ತದೆ. ಇದರ ಪ್ರಕಾರ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ತಪ್ಪಿಹೋಗಿದ್ದ ಯದುವಂಶದ ಅಧಿಕಾರವನ್ನು ಮತ್ತೆ ದೊರಕಿಸಿಕೊಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ ವ್ಯಕ್ತಿಯಾಗಿದ್ದಾನೆ ಹಾಗೂ ಮೈಸೂರು ಸಂಸ್ಥಾನದಲ್ಲಿ ಕ್ರಿ.ಶ 1878–1881ರ ವರೆಗೆ ಮೈಸೂರಿನ ಮುಖ್ಯ ಆಯುಕ್ತರ ಸೇವೆ ಕ್ರಿ.ಶ 1881–1882ರಲ್ಲಿ ಮೈಸೂರಿನ ರೆಸಿಡೆಂಟನಾಗಿದ್ದು, ಆ ಸುಸಂದರ್ಭದಲ್ಲಿ ಗೋರ್ಡನ್ ಕಟ್ಟಡದಲ್ಲಿ ವಾಸ್ತವ್ಯ ಹೂಡಿದನು ಎಂಬುದು ತಿಳಿದುಬರುತ್ತದೆ. ಆತನ ಸ್ಮರಣಾರ್ಥವಾಗಿ ಪ್ರತಿಮೆಯನ್ನು ನಿರ್ಮಿಸಲಾಗಿದೆ. ಯಾವುದೇ ಒಬ್ಬ ಪ್ರೇಕ್ಷಕ, ಪ್ರವಾಸಿಗ ಅಲ್ಲಿದ್ದಂತಹ ಸಮಯದಲ್ಲಿ ಪ್ರತಿಮೆಯನ್ನು ಕುತೂಹಲದಿಂದ ನೋಡುವಂತಹ ಸೋಜಿಗವಾಗಿದೆ.

**ಮಹಾನಗರ ಪಾಲಿಕೆ**

ಮೈಸೂರು ಸಂಸ್ಥಾನದ ಹಲವಾರು ಕಲಾತ್ಮಕ ಕೊಡುಗೆಗಳಲ್ಲಿ 'ನಗರಪಾಲಿಕೆಯು ಒಂದು.' ಮೈಸೂರು ನಗರ ಒಡೆಯರ ಪ್ರಮುಖ ರಾಜಧಾನಿ ಏಕೆಂದರೆ ಅವರ ಮನೆತನವು ಅಸ್ತಿತ್ವಕ್ಕೆ ಬಂದದು ಈ ನೆಲದಲ್ಲಿಯೆ ಇಂತಹ ನೆಲದ ಒಡಲಲ್ಲಿ ರಾಜವಂಶಸ್ಥರು ಹಲವು ಅಭಿವೃದ್ಧಿ ಪರವಾದ ಆಡಳಿತವನ್ನು ನೀಡಿರುವುದನ್ನು ಕಾಣಬಹುದು. ಅದರಲ್ಲಿ ಮೈಸೂರು ನಗರದ ಪೌರಾಡಳಿತದ ಬೆಳವಣಿಗೆಯನ್ನು 19ನೇ ಶತಮಾನದ ಮಧ್ಯಭಾಗದಿಂದ ಗುರುತಿಸಬಹುದು. ಪೌರಚಟುವಟಿಕೆಗಳಲ್ಲಿ ಜನಸಾಮಾನ್ಯರ ಸಹಭಾಗಿತ್ವ ಇರಬೇಕೆಂಬ ಪರಿಕಲ್ಪನೆಯನ್ನು ಇಟ್ಟುಕೊಂಡು ಆಂಗ್ಲ ಸರ್ಕಾರ ಹೊರಡಿಸಿದ 1861ರಲ್ಲಿ ಪ್ರಥಮ ನಗರ ಸಮಿತಿ ಉದಯವಾಯಿತು. ಐದು ಜನ ಅಧಿಕಾರಿಗಳ ಹಾಗೂ ಐದು ಜನರ ಅಧಿಕಾರೇತರರ ಸಮಿತಿ ಅದಾಗಿತ್ತು. ಅಷ್ಟಗ್ರಾಮ ವಿಭಾಗದ ಮುಖ್ಯಸ್ಥರು ನಗರ ಸಭೆಯ ಅಧ್ಯಕ್ಷರಾಗಿದ್ದರು. ಆ ಸಮಿತಿಗೆ ಯಾವುದೇ ಶಾಸನಬದ್ಧ ಅಧಿಕಾರ ಇರಲಿಲ್ಲ ಅದು ಕೇವಲ ಸಲಹಾ ರೂಪದ ಸಮಿತಿಯಾಗಿತ್ತು. ಬ್ರಿಟಿಷ್ ಕಮಿಷನರ್ ಆಜ್ಞೆಯ ಮೂಲಕ ನಗರ ಸಮಿತಿಗಳಿಗೆ ಶಾಸನಬದ್ಧ ಅಧಿಕಾರವನ್ನು ಕ್ರಿ.ಶ.1871ರಲ್ಲಿ ನೀಡಿತ್ತು. ಇಂತಹ ಅಧಿಕಾರ ಸ್ಥಳೀಯ ಸಂಸ್ಥೆಗಳ ಇತಿಹಾಸದಲ್ಲಿ ಒಂದು ಚಾರಿತ್ರಿಕವಾದ ಮೈಲುಗಲ್ಲಾಗಿದೆ. ಈ ಶಾಸನ ಕ್ರಿ.ಶ 1888ರಲ್ಲಿ ಮೈಸೂರು ನಗರಕ್ಕೂ ವಿಸ್ತರಿಸಲ್ಪಟ್ಟಿತ್ತು. ಈ ವ್ಯವಸ್ಥೆಗೆ ಪದನಿಮಿತ ಕಮಿಷನ್ನರ್ ಆಯುಕ್ತರಾಗಿದ್ದರು. ಪ್ರಥಮ ಬಾರಿಗೆ 1892ರಲ್ಲಿ ನಗರ ಸಮಿತಿಗೆ 24 ಜನ ಸದಸ್ಯರು ಇರಬೇಕೆಂದು ನಿರ್ಧರಿಸಿ ಅವರಲ್ಲಿ ಅರ್ಧದಷ್ಟನ್ನು ಚುನಾಯಿಸಲಾಯಿತ್ತು. ಇದು ಪ್ರಜಾಪ್ರಭುತ್ವದ ಹೆಗ್ಗುರುತಾಗಿದೆ. ಅಂದಿನ ಸನ್ನಿವೇಶದಲ್ಲಿ ಕೋಟೆ, ಲಷ್ಕರ್, ದೇವರಾಜ, ಕೃಷ್ಣರಾಜ, ಮಂಡಿ, ಚಾಮರಾಜ, ನಜರಬಾದ್ ಮೊಹಲ್ಲಾಗಳು ಇದರ ವ್ಯಾಪ್ತಿಗೆ ಒಳಪಟ್ಟಿದ್ದವು. ಇಂತಹ ಆಡಳಿತ ಪರಂಪರೆಯನ್ನು ಹೊಂದಿರುವ

ನಗರಪಾಲಿಕೆಯ ಆಡಳಿತವು 2023 ಸಾಲಿನಲ್ಲಿ 161 ವರ್ಷಗಳ ಸಾರ್ಥಕ ಸೇವೆಯನ್ನು ಸಲ್ಲಿಸಿ ಮುನ್ನಡೆಯುತ್ತಿರುವುದನ್ನು ಕಾಣಬಹುದು. ಇದು ಎರಡು ಅಂತಸ್ತುಗಳನ್ನುಳ್ಳ ಕಟ್ಟಡ. ಈ ಸುಂದರ ಕಟ್ಟಡವು ಇಂಡೋಸಾರ್ಸನಿಕ್ ವಾಸ್ತುಕಲಾಶೈಲಿಯನ್ನು ಹೊಂದಿದೆ. ಮುಂಭಾಗದ ಚಾಚುವಿನ ಮಂಟಪವು ಬೈಜಾಂಟಿಯನ್ ಶೈಲಿಯನ್ನು ಹೊಂದಿದೆ ಹಾಗೂ ಎರಡು ಮಿನಾರ್‌ಗಳನ್ನು ಹೊಂದಿರುವ ಈ ಕಟ್ಟಡಕ್ಕೆ ಮೈಸೂರಿನ ಮನ್ಮಹರಾಜರಾದ ನಾಲ್ವಡಿಕೃಷ್ಣರಾಜ ಒಡೆಯರ್‌ರವರು ಸ್ವಹಸ್ತದಿಂದ 1931 ಜನವರಿ 24ರ ಸೋಮವಾರದಂದು ಈ ಭವ್ಯ ಕಟ್ಟಡಕ್ಕೆ ಶಿಲಾನ್ಯಾಸವನ್ನು ನೆರವೇರಿಸಿದರು. ಇಂತಹ ಪರಂಪರೆಯನ್ನು ಹೊಂದಿರುವ ಪಾಲಿಕೆಯು ಇಂದು ಮೈಸೂರು ಜನತೆಯ ಹಲವಾರು ಜೀವನಾವಶ್ಯಕವಾದ ನೀರು, ಪರಿಸರ, ನೈರ್ಮಲ್ಯ, ಜನನ–ಮರಣ, ನಗರಗಳ ನಿರ್ಮಾಣ, ಕಂದಾಯ, ಆಡಳಿತ ವ್ಯವಹಾರಗಳು, ಮೈಸೂರಿನ ಪ್ರಥಮ ಪ್ರಜೆ ಮೇಯರ್, ನಗರದ ಶಾಸಕರು, ಪಾಲಿಕೆಯ ಸದಸ್ಯರುಗಳು, ಅಧಿಕಾರಿಗಳು ಪರಂಪರೆಯ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಾರೆ.

**ಜಿಲ್ಲಾ ಪಂಚಾಯಿತಿ ಕಾರ್ಯಾಲಯ**

ಈ ಭರತ ಭೂಮಿ ಪ್ರಜಾಪ್ರಭುತ್ವವಾದಿ ರಾಷ್ಟ್ರವಾಗಿದೆ. ಇಲ್ಲಿ ಪ್ರಜೆಗಳೆ ಪ್ರಭುಗಳು ಪ್ರಜೆಗಳಿಂದ ಪ್ರಜೆಗಳಿಗಾಗಿ, ಪ್ರಜೆಗಳೆ ಆರಿಸಿ ಪ್ರಜೆಗಳೇ ನಡೆಸುವಂತಹ ಸರ್ಕಾರವಾಗಿರುವುದು ಇದರ ವಿಶೇಷತೆ. ಹೀಗೆ ತಮ್ಮ ಯೋಗಕ್ಷೇಮವನ್ನು ತಾವೇ ಆರಿಸಿದ ಸರ್ಕಾರವು ತಮ್ಮನ್ನು ನೋಡಿಕೊಳ್ಳುವಂತಹ ವ್ಯವಸ್ಥೆಯನ್ನು ನಾವು ಕಾಣಬಹುದು ಹಾಗೂ ಜನಸಾಮಾನ್ಯರಿಗೆ ತಮ್ಮ ಸಮಸ್ಯೆಗಳನ್ನು ಮನೆ ಬಾಗಿಲಿನಲ್ಲೆ ಪರಿಹಾರವಾಗಬೇಕು. ಇದಕ್ಕಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟ, ಗ್ರಾಮ ಮಟ್ಟದಲ್ಲೂ ತಕ್ಕಮಟ್ಟಿಗೆ ಸಣ್ಣ–ಪುಟ್ಟ ಸಮಸ್ಯೆಗಳನ್ನು ಸಲೀಸಾಗಿ ಬಗೆಹರಿಸಿಕೊಳ್ಳಬಹುದು. ಈ ಒಂದು ಕಲ್ಪನೆಯು ಗಾಂಧೀಜಿ ಕಂಡ ರಾಮರಾಜ್ಯದ ಕಲ್ಪನೆಯೂ ಕೂಡ ಆಗಿದೆ. ಈ ಕಟ್ಟಡವನ್ನು 1935ರಲ್ಲಿ ಸ್ಥಾಪನೆ ಮಾಡಲಾಯಿತು. ಇದು ಪ್ರಾರಂಭದಲ್ಲಿ ಮೈಸೂರು ಜಿಲ್ಲಾಭಿವೃದ್ಧಿ ಮಂಡಳಿ, ಜಿಲ್ಲಾ ಬೋರ್ಡ್ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಪ್ರಸ್ತುತ ಸುಧೀರ್ಘ 88 ವರ್ಷಗಳ ಇತಿಹಾಸವನ್ನು ಒಳಗೊಂಡಿದೆ. ಇದನ್ನು ಮೈಸೂರು ಸಂಸ್ಥಾನದ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್‌ರವರು ಜಿಲ್ಲಾ ಮಂಡಳಿ ಕಛೇರಿ ಕಟ್ಟಡಕ್ಕಾಗಿ ಇದನ್ನು ನಿರ್ಮಾಣ ಮಾಡಿಸಿದರು. 1936ರಿಂದ ಇದು ಕಾರ್ಯವನ್ನು ನಿರ್ವಹಿಸುತ್ತಿದೆ. ಇದು ಆ ಕಾಲದ ಅತ್ಯಂತ ಆಧುನೀಕ ಎಂಬ ಹೆಗ್ಗಳಿಕೆ ಈ ಕಟ್ಟಡದ್ದು. ಅತ್ಯಂತ ಸರಳವಾದ ರಚನೆ, ವಿಶೇಷವಾದ ಕಮಾನುಗಳು, ವರಾಂಡಗಳು, ಬಾಲ್ಕನಿ, ಕಟ್ಟಡದ ಮಧ್ಯಭಾಗದ ವಿನ್ಯಾಸ ಇವುಗಳಿಂದ ಆಕರ್ಷಿತವಾದುದಾಗಿದೆ. ಕಟ್ಟಡವು ಆರಂಭದಲ್ಲಿ ಜಿಲ್ಲಾ ಮಂಡಳಿ ಇಲಾಖೆ, ಅನಂತರ ಲೋಕೋಪಯೋಗಿ ಇಲಾಖೆ, ಕೆಲಸಮಯ ಕಾಲೇಜು, ಮೈಸೂರು (ಜಿಲ್ಲಾಧಿಕಾರಿಗಳ) ಕಾರ್ಯಾಲಯವಾಗಿ ಮಾರ್ಪಟ್ಟು ಅನಂತರ ತನ್ನನ್ನು ಪಂಚಾಯಿತಿ ವ್ಯವಸ್ಥೆಗೆ ಬಂದು ತನ್ನ ಕಾರ್ಯವನ್ನು ನಡೆಸುತ್ತಿದೆ. ಪ್ರಸ್ತುತ ಪಂಚಾಯತ್ ಕಾರ್ಯನಿರ್ವಹಣೆ, ಸ್ಥಾಯಿಸಮಿತಿಗಳು, ಆಯವ್ಯಯ, ವಿವಿಧ ಯೋಜನೆ, ಕಾರ್ಯಕ್ರಮಗಳು, ಶಿಕ್ಷಣಕ್ಷೇತ್ರ, ಆರೋಗ್ಯ, ನೀರು ಸರಬರಾಜು, ನೈರ್ಮಲ್ಯ, ಕೃಷಿ, ಸಮಾಜ ಕಲ್ಯಾಣ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ರೇಷ್ಮೆ–ಪಶುಪಾಲನಾ, ತೋಟಗಾರಿಕೆ, ಮೀನುಗಾರಿಕೆ,

ಸ್ವರ್ಣಜಯಂತಿ ಸ್ವರೋಜ್ಗಾರ್ ಯೋಜನೆ, ಸುವರ್ಣ ಗ್ರಾಮೋದಯ, ಬಂದರು, ಸ್ವಚ್ಛತಾ ಆಂದೋಲನಾ ಮುಂತಾದ ಚಟುವಟಿಕೆಗಳನ್ನು ತನ್ನ ಒಡಲಲ್ಲಿಟ್ಟುಕೊಂಡು ಮುನ್ನಡೆಯುತ್ತಿದೆ.

**ನಗರಾಭಿವೃದ್ಧಿ ಪ್ರಾಧಿಕಾರ**

ಮೈಸೂರಿನ ಮಹಾನಗರ ಪಾಲಿಕೆಯಂತೆ ಕಾರ್ಯನಿರ್ವಹಿಸುವಂತಹ ಮತ್ತೊಂದು ಸಂಸ್ಥೆಯೆಂದರೆ 'ನಗರಾಭಿವೃದ್ಧಿ ಪ್ರಾಧಿಕಾರ.' ಇದು ತನ್ನ ಒಡಲಲ್ಲಿ ಶತಮಾನಗಳ ಚರಿತ್ರೆಯನ್ನು ಹೊಂದಿದೆ. ಇದು ನಗರದ ಪ್ರತಿಯೊಂದು ಬಡಾವಣೆಗಳ ಚಿತ್ರಣವನ್ನು ಹಾಗೂ ಹೊಸ–ಹೊಸ ಬಡಾವಣೆಗಳ ನಿರ್ಮಾಣ ಕಾರ್ಯದಲ್ಲಿಯು ಸಹ ತನ್ನನ್ನು ಗುರುತಿಸಿಕೊಂಡಿದೆ ಇಂತಹ ಸಂಸ್ಥೆಯು ಮೈಸೂರು ಸಂಸ್ಥಾನದಲ್ಲಿ ಉಗಮವಾಗಲು ಪ್ರಮುಖ ಕಾರಣವೆಂದರೆ ಮೈಸೂರು ಸಂಸ್ಥಾನದಲ್ಲಿ 19ನೇ ಶತಮಾನದ ಕೊನೆಯಲ್ಲಿ ಮೈಸೂರು ಜನತೆಯನ್ನು ಮಹಾಮಾರಿಯಾಗಿ ಪದೇ ಪದೇ ಪೀಡಿಸುತ್ತಿದ್ದ ಪ್ಲೇಗ್ ರೋಗವು ಹಲವಾರು ಹಲವಾರು ಜನತೆಯನ್ನು ಬಲಿ ತೆಗೆದುಕೊಂಡಿತ್ತು. ಆಗ ಮೈಸೂರಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಈ ಪ್ಲೇಗ್ ಖಾಯಿಲೆಯಿಂದ ಸಂಸ್ಥಾನವನ್ನು ರಕ್ಷಿಸಲು ಶಾಶ್ವತವಾದ ವಿಧಾನವನ್ನು ಕಂಡುಹಿಡಿಯಬೇಕೆಂದು ಬಯಸಿದರು. ಇದಕ್ಕೆ ಮೂಲ ಕಾರಣ ರಾಜರ ಪ್ರೀತಿಯ ಸಹೋದರಿಯಾದ ಕೃಷ್ಣರಾಜಮ್ಮಣ್ಣಿಯವರು ಪ್ಲೇಗ್ ರೋಗದಿಂದ ಮರಣ ಹೊಂದಿದ್ದು ಅದರ ಜ್ಞಾಪಕಾರ್ಥವಾಗಿ ಕ್ರಿ.ಶ. 1–1–1904ರಂದು ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯನ್ನು ಸ್ಥಾಪಿಸಲಾಯಿತು. ಇದು ಮೈಸೂರಿನ ನಗರದ ಭವಿಷ್ಯದ ದೂರದೃಷ್ಟಿತ್ವವನ್ನು ಹೊಂದಿದ್ದು ಇದರ ಸ್ಥಾಪನೆ ಮಾದರಿ ಮೈಸೂರಿನ ಬೆಳವಣಿಗೆಗೆ ಕಾರಣವಾಯಿತು. ಇದರ ಪ್ರಥಮ ಅಧ್ಯಕ್ಷರಾಗಿ ಸೀತರಾಮನ್‌ರವರು ಆಯ್ಕೆಯಾದರು. ಇಂತಹ ಸಂಸ್ಥೆಯು ಪ್ರಾರಂಭದಲ್ಲಿ ಪುರಸಭೆಯ ಕಟ್ಟಡದ ದಕ್ಷಿಣ ಭಾಗದಲ್ಲಿ ಕಾರ್ಯವನ್ನು ನಿರ್ವಹಿಸುತ್ತಿತ್ತು. ಕಾಲಾನಂತರದಲ್ಲಿ ತನ್ನದೇ ಆದ ಕಟ್ಟಡವನ್ನು ಝಾನ್ಸಿರಾಣಿ ಲಕ್ಷ್ಮಿಬಾಯಿ ರಸ್ತೆಯಲ್ಲಿರುವಂತಹ ಸ್ಥಳದ ಕಟ್ಟಡದಲ್ಲಿ 1971ರಿಂದ ತನ್ನ ಕಾರ್ಯವನ್ನು ನಿರ್ವಹಿಸುತ್ತಿದೆ.

**ಆಡಳಿತ ತರಬೇತಿ ಸಂಸ್ಥೆ**

ಜಗತ್ತಿನ ಯಾವುದೇ ಒಂದು ದೇಶವು ವಿಶ್ವದ ಭೂಪಟದಲ್ಲಿ ತನ್ನನ್ನು ಗುರುತಿಸಿಕೊಳ್ಳುತ್ತಿದೆ ಎಂದರೆ ಅದರ ಸಮರ್ಪಕವಾದ ಆಡಳಿತ ವ್ಯವಸ್ಥೆ. ಯಾವುದೇ ಒಂದು ಕೆಲಸ ಯಶಸ್ವಿಯಾಗಬೇಕಾದರೆ ಅದನ್ನು ನಡೆಸುವವರಿಗೆ ಆ ಕೆಲಸದ ಸಂಪೂರ್ಣ ಜ್ಞಾನ ಇರಬೇಕಾಗುತ್ತದೆ. ಎಲ್ಲರೂ ಎಲ್ಲ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಿಲ್ಲ. ನಾವು ಯಾವ ಕಾರ್ಯದಲ್ಲಿ ತಲ್ಲಿನರಾಗುತ್ತೇವೆಯೋ ಅದರಲ್ಲಿ ಮುಂದುವರೆಯಬೇಕಾಗುತ್ತದೆ. ಅದೇ ರೀತಿ ಆಡಳಿತ ನಡೆಸುವವರಿಗೆ ಕಾನೂನಿನ ಪರಿಚಯ, ತಾವು ಯಾರಿಂದ ಹಾಗೂ ಯಾರಿಗಾಗಿ ಕೆಲಸ ಮಾಡುತ್ತಿದ್ದೇವೆ? ಅದಕ್ಕೆ ಬೇಕಾಗುವ ಸಮಯ ಹಾಗೂ ಸಾಧನಗಳು ಆ ಕೆಲಸಕ್ಕೆ ಸಂಬಂಧಿಸಿದಂತೆ ಇರುವ ಕಾನೂನು, ನ್ಯಾಯಾಲಯದ ತೀರ್ಪುಗಳು ಹಾಗೂ ನೌಕರರಿಗೆ ಇವೆಲ್ಲದರ ಅರಿವಿರಬೇಕು. ಇಂತಹವುಗಳನ್ನು ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರಿಗೆ ತರಬೇತಿ ನೀಡಲೆಂಸದೇ ಇರುವ ಸಂಸ್ಥೆ 'ಮೈಸೂರಿನ ಆಡಳಿತ ತರಬೇತಿ ಸಂಸ್ಥೆ.' ನಗರದ ಕಾರಂಜಿಕೆರೆ, ರೇಸ್‌ಕೋಸ್ ರಸ್ತೆ ಹಾಗೂ ಲಲಿತ ಮಹಲ್‌ಗೆ ಹೋಗುವ ಹಾದಿಯಲ್ಲಿ ಕಾಣಸಿಗುತ್ತದೆ. ಈ ಕಟ್ಟಡವು ಒಂದು ರೀತಿಯಲ್ಲಿ ಆಕರ್ಷಣೆಯನ್ನು ಬೀರುವಂತದಾಗಿದೆ. ಏಕೆಂದರೆ ಈಗಿನ ಆಡಳಿತ ತರಬೇತಿ

ಸಂಸ್ಥೆಯು ಬಹುಭಾಗವನ್ನು ಮೈಸೂರು ಸಂಸ್ಥಾನದ ಅರಸರು ಕ್ರಿ.ಶ 1910–12ರಲ್ಲಿ ಅಧಿಕಾರವಧಿಯಲ್ಲಿದ್ದ ನಾಲ್ವಡಿರವರು ನಿರ್ಮಿಸಿದರು. ಇದಕ್ಕೆ 100 ವರ್ಷಗಳ ಪರಂಪರೆಯಿದೆ. ಆರಂಭದಲ್ಲಿ ಇದನ್ನು ಅತಿಥಿಗಳಿಗೆ ಬಳಸಲಾಗುತ್ತಿತ್ತು. ನಂತರ ಬ್ರಿಟಿಷರ ಜಾಕಿಗಳಿಗಾಗಿ ಇದು ಬಳಕೆಯಾಗುತ್ತಿತ್ತು. ಆ ಕಾರಣದಿಂದಲೇ ಇದನ್ನು 'ಜಾಕಿ ಕ್ವಾಟ್ರಸ್' ಎಂದು ಕರೆಯುತ್ತಾರೆ ಹಾಗೂ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿದೆ. ಇವುಗಳ ವಿಶೇಷತೆಯೆಂದರೆ ಕಟ್ಟಡದಲ್ಲಿನ ಮೇಲ್ಛಾವಣಿ, ಉಪಯೋಗಿಸಿರುವ ಹಂಚುಗಳು ಆಕರ್ಷಕವಾಗಿವೆ. ಮುಂದೆ ಒಂದೊಂದು ಬಾಗಿಲಿಗೂ ತ್ರಿಭುಜಾಕೃತಿಯ ಆಕಾರವನ್ನು ನೀಡಿರುವುದು ವಿಶಿಷ್ಟವಾಗಿದೆ ಹಾಗೂ ಹುಲ್ಲುಹಾಸಿನ ಮೈದಾನ, ಹಿತಕರವಾದ ವಾತಾವರಣ, ಅಲ್ಲಿನ ಮರಗಳು ಆ ಭವ್ಯ ಕಟ್ಟಡಕ್ಕೆ ಮೆರಗನ್ನು ನೀಡುತ್ತವೆ. ಹಿಂದೆ ಇದ್ದ ಎಂಟು ಕ್ವಾಟ್ರಸ್‌ಗಳನ್ನು ಇಂದಿನ ಆಡಳಿತ ತರಬೇತಿ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿವೆ. ಈ ಕಟ್ಟಡಗಳನ್ನೇ ಜಾಕಿಗಳಿಗಾಗಿ ಉಪಯೋಗಿಸುತ್ತಿದ್ದು ಆನಂತರ ಭಾರತ ಸರ್ಕಾರವು ಸುವ್ಯವಸ್ಥಿತವಾದ ಆಡಳಿತಾತ್ಮಕ ವ್ಯವಸ್ಥೆ ಇರಬೇಕೆಂಬ ಉದ್ದೇಶದಿಂದ ಅಖಿಲ ಭಾರತ ಮಟ್ಟದಲ್ಲಿ ಅಧಿಕಾರಿಗಳಿಗೆ ತರಬೇತಿ ನೀಡಲು 1959ರಲ್ಲಿ ಓರಿಯಂಟೇಷನ್ ಸ್ಟಡಿಸೆಂಟರ್ ಎಂಬ ಸಂಸ್ಥೆಯನ್ನು ಪ್ರಾರಂಭಿಸಿತ್ತು. ಈ ಕಟ್ಟಡದಲ್ಲಿನ ಶಿಲಾನ್ಯಾಸದಲ್ಲಿರುವ ಮಾಹಿತಿ ಪ್ರಕಾರ ದಿನಾಂಕ: 25–12–1959ರಲ್ಲಿ ಅಂದಿನ ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾದ ಬಿ.ಡಿ.ಜತ್ತಿಯವರು 'ಓರಿಯಂಟಲ್ ಸ್ಟಡಿಸೆಂಟರ್'ನ್ನು ಉದ್ಘಾಟಿಸಿದರು ಎಂಬ ಮಾಹಿತಿ ಕಂಡುಬರುತ್ತದೆ.

**ಮೈಸೂರು ವಸ್ತು ಸಂಗ್ರಹಾಲಯ**

ಮೈಸೂರು ಸಂಸ್ಥಾನದಲ್ಲಿ ಕಾಣಸಿಗುವ ಒಂದು ವಿಷಯ ವಸ್ತುವೆಂದರೆ ಅರಸೊತ್ತಿಗೆಯ ಜೊತೆಗೆ ಮೈಸೂರು ಒಡೆಯರು ಪ್ರಜೆಗಳ ಹಿತಸಾಧನೆಗಾಗಿ ಪ್ರಜಾಸತತ್ತೆಯನ್ನು ತಮ್ಮ ಆಡಳಿತದಲ್ಲಿ ಅಳವಡಿಸಿಕೊಂಡಿದ್ದಾರೆ. ಏಕೆಂದರೆ ಮೈಸೂರು ಸಂಸ್ಥಾನ ಕೆಲವು ವರ್ಷಗಳ ಕಾಲ ಹೈದರ್ ಮತ್ತು ಟಿಪ್ಪು ಸುಲ್ತಾನರ ಕಾಲಾವಧಿಯ ನಿರಕುಂಶ ಆಳ್ವಿಕೆಯನ್ನು ಹಾಗೂ ಮೈಸೂರು ಸಂಸ್ಥಾನದಲ್ಲಿ ಟಿಪ್ಪುವಿನ ಮರಣಾ ನಂತರ ಬ್ರಿಟಿಷ್ ಸರ್ಕಾರದ ಕಮಿಷನರ್‌ಗಳ ಆಳ್ವಿಕೆಯ ಅವಧಿಯಲ್ಲಿ ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ಪ್ರಮುಖವಾದ ಅಂಶ ಏಕೆಂದರೆ ಕಮೀಷನರುಗಳ ಆಳ್ವಿಕೆ ಐವತ್ತು ವರ್ಷಗಳು. ಈ ಅವಧಿಯಲ್ಲಿ ಹಲವಾರು ಪ್ರಜಾಸತ್ತಾತ್ಮಕವಾದ ಕಾರ್ಯಗಳನ್ನು ಜಾರಿಗೆ ತಂದರು. ಅದೆ ಪ್ರತಿಫಲವೇ ನ್ಯಾಯಾಲಯಗಳು, ಮೈಸೂರಿನ ನ್ಯಾಯಾಲಯವು ಇಂದಿನ ವಾಣಿವಿಲಾಸ ರಸ್ತೆ ಹಾಗೂ ಚಾಮರಾಜ ಮೊಹಲ್ಲಾದ ವ್ಯಾಪ್ತಿಯಲ್ಲಿ ಕಂಡುಬರುತ್ತದೆ. ಈ ಸುಂದರ ಕಟ್ಟಡವನ್ನು ಕ್ರಿ.ಶ 1885ರಲ್ಲಿ ಹತ್ತನೇ ಚಾಮರಾಜ ಒಡೆಯರ್‌ರವರ ಆಳ್ವಿಕೆ ಮತ್ತು ದಿವಾನರಾಗಿ ಶೇಷಾದ್ರಿ ಅಯ್ಯರ್‌ರವರ ಕಾಲದಲ್ಲಿ ನ್ಯಾಯಾಲಯದ ಬೃಹತ್ ಕಟ್ಟಡವನ್ನು ವಿಶಾಲವಾದ ಜಾಗದಲ್ಲಿ ನಿರ್ಮಿಸಲಾಯಿತು. ಈ ಕಟ್ಟಡವು ಎರಡು ಅಂತಸ್ತನ್ನು ಉಳ್ಳದ್ದಾಗಿದ್ದು ಇದು ಸಂಕಲನ ಚಿಹ್ನೆಯ ರೂಪದಲ್ಲಿರುವ ಎರಡು ಮಾಳಿಗೆಯ ಈ ಮುಖ್ಯ ಕಟ್ಟಡಕ್ಕೆ ಎಡ ಮತ್ತು ಬಲಭಾಗಗಳಲ್ಲಿ ಹೊಂದಿಕೊಂಡಿರುವ ಕಟ್ಟಡಗಳಿವೆ. ಇದರಲ್ಲಿ ಕಮಾನುಗಳಿರುವ ವರಾಂಡಗಳು, ಕೊರಿಂಥಿಯನ್ ಶೈಲಿಯ ಗೋಡೆಯ ನಕಾಶೆಗಳು, ಎರಡನೇ ಅಂತಸ್ತಿನ ಮೇಲೆ ಕೂರಿಸಿರುವ ಪಿರಾಮಿಡ್, ಗಂಡಭೇರುಂಡದ ಚಿತ್ರ ಇನ್ನೂ ಮುಂತಾದ ಕಲಾಪರಂಪರೆಯನ್ನು ಹೊಂದಿದೆ. ಇದರಲ್ಲಿ ನ್ಯಾಯ ತೀರ್ಮಾನ ಗಾಂಭೀರ್ಯತೆಯು ವಿಶಾಲ ಸಭಾಂಗಣ ಹಾಗೂ ಬೃಹತ್ ಕಟ್ಟಡ ವಿನ್ಯಾಸದಲ್ಲಿ

ಒಳಗೊಂಡಿರುವುದನ್ನು ಕಾಣಬಹುದು. ಪ್ರಸ್ತುತವಾಗಿ ನ್ಯಾಯಾಲಯವು ಹಲವಾರು ಮಾರ್ಪಾಡುಗಳನ್ನು ಹೊಂದಿ ಅದರಲ್ಲಿ ಸಿವಿಲ್, ಕ್ರಿಮಿನಲ್, ಶೀಘ್ರಗತಿ ನ್ಯಾಯಾಲಯ, ಕುಟುಂಬ ನ್ಯಾಯಾಲಯ, ಖಾಯಂ ನ್ಯಾಯಾಲಯ ಮತ್ತು ನ್ಯಾಯವನ್ನು ತೀರ್ಮಾನ ಮಾಡುವ ನ್ಯಾಯಾಧೀಶರು, ವಕೀಲರು, ವಕೀಲರ ಸಂಘ ಮುಂತಾದವುಗಳು ಇಲ್ಲಿ ಕಾಣ ಸಿಗುತ್ತವೆ.

ಒಟ್ಟಾರೆಯಾಗಿ ಮೈಸೂರಿನ ಸಂಸ್ಥಾನದ ಇತಿಹಾಸವನ್ನು ಗಮನಿಸಿದಾಗ ಇಲ್ಲಿ ಆಳ್ವಿಕೆ ನಡೆಸಿದ ಒಡೆಯರು ಸುವ್ಯವಸ್ಥಿತವಾಗಿ ಆಳ್ವಿಕೆಯನ್ನು ನಿರ್ವಹಿಸಲು ಈ ತೆರನಾದ ಮಾರ್ಪಾಡುಗಳನ್ನು ಮಾಡಿಕೊಂಡು ಆಡಳಿತ ಭವನಗಳ ಮೂಲಕ ಜನತೆಯ ಕಷ್ಟ–ಕಾರ್ಪಣ್ಯಗಳನ್ನು ಅರಿತು ಕಷ್ಟ–ಕಾರ್ಪಣ್ಯಗಳಿಗೆ ಪರಿಹಾರವನ್ನು ಮಾಡಿ ಯೋಜಿತವಾದ ಆಳ್ವಿಕೆ ಮಾಡಿರುವುದು ಮೈಸೂರಿನ ಹೆಮ್ಮೆಯ ಸಂಗತಿಯಾಗಿದೆ.

**ಪರಾಮರ್ಶನ ಗ್ರಂಥಗಳು**


- ಕೃಷ್ಣರಾವ್. ಎಂ.ವಿ, ಕೇಶವಭಟ್.ಎಂ. (1970). ಕರ್ಣಾಟಕ ಇತಿಹಾಸ ದರ್ಶನ. ಕರ್ನಾಟಕ ಸಹಕಾರಿ ಪ್ರಕಾಶನ, ಬೆಂಗಳೂರು.
- ಲಿಂಗಯ್ಯ ಎಂ.ಕೆ. (1986). ಮೈಸೂರು ಒಂದು ಅಧ್ಯಯನ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಮೈಸೂರು ಜಿಲ್ಲಾ ಗ್ಯಾಜೆಟಿಯರ್. (2010). ಕರ್ನಾಟಕ ಗ್ಯಾಜೆಟಿಯರ್ ಇಲಾಖೆ. ಕರ್ನಾಟಕ ಸರ್ಕಾರ, ಬೆಂಗಳೂರು.
- Hayavdana Rao. C: History of Mysore, Vol (1399-1799-AD), Bangalore, Vol-1- ii.
- MAR Reports : 1886–1956